ಸಚಿವಾಲಯದ ಉಪಹಾರ ಮಂದಿರದ ನೌಕರರುಗಳಿಗೆ ತುಟ್ಟಿ ಭತ್ಯೆ ನೀಡುವ ಬಗ್ಗೆ.

294 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಅವರುಗಳ ಪೈಕಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರುಗಳ ಸಂಖ್ಯೆ ಎಷ್ಟು?

ಇ) ಆ ನೌಕರರುಗಳಿಗೆ ಸರ್ಕಾರ ಇತ್ತೀಚೆಗೆ ವೇತನವನ್ನು ವಿಮರ್ಶಿಸುತ್ತಿದೆಯೇ?

ಈ) ಹಾಗಿದ್ದಲ್ಲಿ ವಿವಿಧ ದರ್ಜೆಯ ಆ ನೌಕರರುಗಳಿಗೆ ಯಾವ ಶ್ರೇಣಿಯಲ್ಲಿ ವೇತನ ನೀಡಲಾಗುತ್ತಿದೆ?

ಉ) ಆ ನೌಕರರುಗಳಿಗೆ ಸರ್ಕಾರದ ನೌಕರರುಗಳಿಗೆ ನೀಡುತ್ತಿರುವ ತುಟ್ಟಿಭತ್ಯೆಯನ್ನು ನೀಡಲಾಗುತ್ತಿದೆಯೆ?

ಊ) ಇಲ್ಲದಿದ್ದಲ್ಲಿ ಆ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಎಪ್ಪತ್ತು (70)

ಮುವತ್ತೈದು (35)

ಪರಿಶೀಲಿಸುತ್ತಿದೆ.

ಉಪಹಾರ ಮಂದಿರದ ಆಡಳಿತ ಸಮಿತಿಯವರು ಉಪಹಾರ ಮಂದಿರದ ನೌಕರರ ವೇತನ ಪರಿಷ್ಕರಣೆ ಬಗ್ಗೆ ಅಧ್ಯಯನ ಮಾಡಲು ಉಪಸಮಿತಿಯನ್ನು ರಚಿಸಿದ್ದು ಅದರಂತೆ ಆಡಳಿತ ಸಮಿತಿಯವರೆ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ದಿನಾಂಕ 1-12-93 ರಿಂದ ಪರಿಷ್ಕರಿಸಿ ವೇತನ ನೀಡುತ್ತಿದ್ದಾರೆ.

1. ಮೇಲ್ವಿಚಾರಕರು - 1190-30-1400-40-1800-50-2200.
2. ನಗದು ಗುಮಾಸ್ತರು : ಮುಖ್ಯ ಆಡಿಗೆಯವರು -960-20-1100-30-400-40-1760.
3. ಸಪ್ಲೈಯರ್ಸ್ -810-15-900-20-1100-30-1310
4. ಕ್ಲೀನರ್ಸ್ : -780-15-900-20-1040.

ಇಲ್ಲ

ಆದರೆ ಉಪಹಾರ ಮಂದಿರದ ವೇತನ ಉಪಸಮಿತಿಯ ವರದಿಯ ಪ್ರಕಾರ ದಿನಾಂಕ 1-12-93ರಿಂದ ನಾನಾ ವಿವಿಧ ದರ್ಜೆಯ ನೌಕರರುಗಳಿಗೆ ತುಟ್ಟಿಭತ್ಯೆ ರೂ.200, ರೂ.175, ರೂ.150 ಮತ್ತು ರೂ.100 ರಂತೆ ತುಟ್ಟಿಭತ್ಯೆ ನೀಡುತ್ತಿರುತ್ತಾರೆ.

ಇವರು ಸರ್ಕಾರಿ ನೌಕರರಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪುಷ್ಪಕ ಬಸ್ಸುಗಳನ್ನು ವಿಧಾನ ಸೌಧದ ಮೂಲಕ ಓಡಿಸುವ ವ್ಯವಸ್ಥೆ

296 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ವೃತ್ತದ ಮೂಲಕ ಎಷ್ಟು ಪುಷ್ಪಕ್ ಬಸ್ಸಗಳು ಪ್ರತಿದಿನ ಸಂಚರಿಸುತ್ತವೆ.

ಆ) ಅವುಗಳನ್ನು ವಿಧಾನಸೌಧದ ಮೂಲಕ ಓಡಿಸಿದರೆ ಸಾರ್ವಜನಿಕರಿಗೆ ಕಚೇರಿಗಳಿಗೆ ಹೋಗತಕ್ಕವರಿಗೆ ಅನುಕೂಲವಾಗುವುದಿಲ್ಲವೇ?

ಇ) *ಈ ಬಸ್ಸುಗಳನ್ನು ವಿಧಾನಸೌಧ ಮಾರ್ಗವಾಗಿ ಆರಮನೆ ರಸ್ತೆಯಲ್ಲಿ ಮೈಸೂರು ಬ್ಯಾಂಕಿನ ಮೂಲಕ ಬೆಂಗಳೂರು ಬಸ್ ನಿಲ್ದಾಣವನ್ನು ತಲುಪುವ ವ್ಯವಸ್ಥೆ ಮಾಡಲಾಗುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ವಿಜಯನಗರ-ಶಿವಾಜಿನಗರ ಮಾರ್ಗದ 4 ಪುಷ್ಪಕ್ ಬಸ್ಸುಗಳನ್ನು ಕೆ.ಆರ್. ವೃತ್ತ ಮಾರ್ಗವಾಗಿ ಓಡಿಸಲಾಗುತ್ತಿದೆ.

ಆ) ಪುಷ್ಪಕ್ ಬಸ್ಸುಗಳನ್ನು ಅತೀ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ಎರಡು ಸ್ಥಳಗಳ ನಡುವೆ ವೇಗವಾದ ಸಾರಿಗೆ ಸೌಲಭ್ಯ ಒದಗಿಸಲು ಪ್ರಾರಂಭಿಸಲಾಗಿದೆ. ಈ ಬಸ್ಸುಗಳನ್ನು ಹತ್ತಿರದ ಮಾರ್ಗದಲ್ಲಿ ನಿಯಮಿತ ನಿಲುಗಡೆಗಳೊಂದಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ ಈ ಬಸ್ಸುಗಳಿಗ ಇನ್ನೂ ಹಚ್ಚಿನ ನಿಲುಗಡೆಗಳನ್ನು ನೀಡಿದಲ್ಲಿ ವೇಗವಾದ ಸಾರಿಗೆ ಸೌಲಭ್ಯಕ್ಕಾಗಿ ಪುಷ್ಪಕ್ ಬಸ್ಸುಗಳನ್ನು ಓಡಿಸುವ ಉದ್ದೇಶಕ್ಕೆ ಧಕ್ಕೆಯಾಗುವುದು. ಆದಾಗ್ಯೂ ಇತರೆ ನಗರ ಸಾರಿಗೆ ಬಸ್ಸುಗಳು ವಿಧಾನಸೌಧ ಮತ್ತು ಸುತ್ತಮುತ್ತಲಿನ ಕಛೇರಿಗಳಿಗೆ ಹೋಗುವ ಪ್ರಯಾಣಿಕರ ಅವಶ್ಯಕತೆಗಳನ್ನು ಪೂರೈಸುತ್ತಿವೆ.

ಇ) ಪ್ರಸ್ತಾವಿಸಿರುವ ಮಾರ್ಗವು ಪುಷ್ಪಕ್ ಬಸ್ಸುಗಳ ಆಚರಣೆಗೆ ಸುತ್ತುಬಳಸಿನ ಮಾರ್ಗವಾಗಿರುತ್ತದೆ.

ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳು

233- ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳೆಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು):*

ಆ) *ಹಿಂದೆ ಇದ್ದ ಹಸಿರು ಕಾರ್ಡುಗಳೆಷ್ಟು ಹಾಗೂ ಹೆಚ್ಚುವರಿ ಹಸಿರು ಕಾರ್ಡುಗಳನ್ನು ಹಂಚಲ್ಪಟ್ಟ ಮೇಲೆ ಪಡಿತರ ಸಾಮಗ್ರಿಗಳ ವಿತರಣೆಯನ್ನು ಹೆಚ್ಚು ಮಾಡದಿರಲು ಕಾರಣವೇನು?*

ಇ) *ಪಡಿತರ ಸಾಮಗ್ರಿಗಳ ಹಂಚಿಕೆ ಬಹಳ ಕಡಿಮೆ ಪ್ರಮಾಣವಾಗಿ ಸಾಮಾನ್ಯ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?*

ಶ್ರೀಮತಿ ಮನೋರಮ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ)46.85 ಲಕ್ಷ (ಹಸಿರು ಕಾರ್ಡುಗಳ ಬದಲಾಗಿ ತ್ರಿವರ್ಣ ಕಾರ್ಡುಗಳನ್ನು ಹಂಚಲಾಗಿದೆ).

(ಜಿಲ್ಲಾವಾರು ಮಾಹಿತಿ ತಃಖ್ತೆ ಲಗತ್ತಿಸಿದೆ)

ಆ) 30.83 ಲಕ್ಷ ಕೇಂದ್ರ ಸರ್ಕಾರದವರು 68,500 ಮೆ. ಟನ್ ಅಕ್ಕಿ, 25,000 ಮೆ. ಟನ್ ಗೋಧಿಯನ್ನು ಪ್ರತಿ ತಿಂಗಳು ಬಿಡುಗಡೆ ಮಾಡುತ್ತಿದ್ದಾರೆ. ಆ ಪ್ರಕಾರ ಎಲ್ಲಾ ಕಾರ್ಡುದಾರರಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ತಿಂಗಳು ತಿಂಗಳಿಗೆ ಪಡಿತರ ಚೀಟಿಗಳು ಹೆಚ್ಚಾಗುತ್ತಿದ್ದು ಭಾರತ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ ಪ್ರಮಾಣವನ್ನು ಈ ತಿಂಗಳವರೆಗೆ ಹೆಚ್ಚು ಮಾಡಿರುವುದಿಲ್ಲ. ಈ ಕಾರಣಕ್ಕಾಗಿ ಈಗ ನೀಡುತ್ತಿದ್ದ ಪ್ರಮಾಣದಲ್ಲೆ ಎಲ್ಲಾ ಕಾರ್ಡುದಾರರಿಗೆ ಆಹಾರಧಾನ್ಯ ವಿತರಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಇ) ಬಂದಿದೆ. ಕರ್ನಾಟಕ ರಾಜ್ಯ ಸರ್ಕಾರವು ಪದೇ ಪದೇ ಒತ್ತಡ ತಂದ ಪರಿಣಾಮವಾಗಿ ಕೇಂದ್ರ ಸರ್ಕಾರದವರು 1994ರ ಮಾರ್ಚ್ ತಿಂಗಳಿನಿಂದ ಅನ್ವಯಿಸುವಂತೆ ರಾಜ್ಯಕ್ಕೆ ಅಕ್ಕಿ ಮತ್ತು ಗೋಧಿ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿರುತ್ತಾರೆ. ಈವರೆಗೆ